**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 27/2017 ಅ.ಸಾ.3**

**ಚಾ.ಸಾ.15**

| | | |
|---|---|---|
| ಸಾಕ್ಷಿದಾರರ ಹೆಸರು | - | ರವಿರಾಜ ಆಚಾರ್ಯ |
| ತಂದೆಯ ಹೆಸರು | - | ಶೇಷಪ್ಪ ಆಚಾರ್ಯ |
| ವಯಸ್ಸು | - | 54 ವರ್ಷ |
| ಉದ್ಯೋಗ | - | ಅಕ್ಕಸಾಲಿಗ |
| ವಿಳಾಸ | - | ಪರ್ಕಳ, ಉಡುಪಿ ತಾಲೂಕು. |

ದಿನಾಂಕಃ 14-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಕಳೆದ 20 ವರ್ಷಗಳಿಂದ ಉಡುಪಿಯ ಪರ್ಕಳದಲ್ಲಿ ಶ್ರೀರಾಜ್ ಜ್ಯುವೆಲ್ಲರ್ಸ್ ಎಂಬ ಚಿನ್ನ, ಬೆಳ್ಳಿ ಕೆಲಸ ಮಾಡುವ ಅಂಗಡಿ ಇಟ್ಟುಕೊಂಡು ಬರುತ್ತಿದ್ದೇನೆ. ಆಭರಣಗಳಿಗೆ ಒರೆ ಹಚ್ಚಿ ಅವುಗಳ ಗುಣಮಟ್ಟವನ್ನು ಅಳೆಯುವ ಪರಿಣಿತಿ ಹೊಂದಿರುತ್ತೇನೆ. ದಿನಾಂಕ 19-01-2017 ರಂದು ಮಣಿಪಾಲ ಪೋಲಿಸ್ ಠಾಣೆಯ ಎ.ಎಸ್.ಐ. ಠಾಣೆಗೆ ತಂದು ಹಾಜರುಪಡಿಸಿದ ಆಭರಣಗಳಾದ ಒಂದು ಜೊತೆ ಬೆಂಡೋಲೆ, ಕರಿ ಮಣಿ ಸರ ಹಾಗೂ ಚಿನ್ನದಂತೆ ಕಾಣುವ ಜುಮುಕಿ ಗಳನ್ನು ಪರಿಶೀಲಿಸಿ ಅವುಗಳಲ್ಲಿ ಎಂಒ 1 ಬೆಂಡೋಲೆ ಹಾಗೂ ನಿಪಿ.16 ರಲ್ಲಿ ಕಾಣುವ ಕರಿಮಣಿ ಸರ ಚಿನ್ನದ ಆಭರಣಗಳು ಎಂದು ದೃಢೀಕರಿಸಿರುತ್ತೇನೆ. ಜುಮುಕಿ ರೋಲ್ಡ್ ಗೋಲ್ಡ್ ಆಗಿರುತ್ತದೆ. ಈ ಬಗ್ಗೆ ತಯಾರಿಸಿದ ಮಹಜರಿಗೆ ಸಹಿ ಮಾಡಿರುತ್ತೇನೆ. ಷದ್ರಿ ಮಹಜರನ್ನು ನಿಪಿ.18 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು.

**4 ನೇ ಆರೋಪಿ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದ**

ಚಿನ್ನಾಭರಣ ಒರೆ ಹಚ್ಚಿ ನೋಡುವ ಅನುಭವ ಹೊಂದಿರುವ ಬಗ್ಗೆ ದಾಖಲೆ ಇರುವುದಿಲ್ಲ. ಕ್ಯಾರೆಟ್ ಆಧಾರದಲ್ಲಿ ಚಿನ್ನದ ಗುಣಮಟ್ಟ ಅಳೆಯುತ್ತಾರೆ. ಮಹಜರಿನಲ್ಲಿ ಕ್ಯಾರೆಟ್ ಗುಣಮಟ್ಟ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ಪರೀಕ್ಷಿಸಿರುವುದಿಲ್ಲ,

ಗುಣಮಟ್ಟ ಅಳೆದದ್ದು ಇಲ್ಲ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3, 5 ರಿಂದ 7 ನೇ ಆರೋಪಿತರ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.